# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಯಾದಗಿರಿ ಜಿಲ್ಲೆಯ ಯಾದಗಿರಿ ತಾಲ್ಲೂಕಿನ ಗಾಜರಕೋಟ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾದ ಶ್ರೀಮತಿ ಕಾಶಮ್ಮ ಗಂಡ ಅಂಜಪ್ಪ, ಉಪಾಧ್ಯಕ್ಷರಾದ, ಶ್ರೀಮತಿ ಅನುಸೂಜ ಗಂಡ ಸಾಬಣ್ಣ ಗಾರೇಬಾನಿ, ಸದಸ್ಯರುಗಳಾದ, ಶ್ರೀಮತಿ ಮೋನಮ್ಮ ಗಂಡ ನಾರಾಯಣಪ್ಪ, ಶ್ರೀ ನಾಗಪ್ಪ ತಂದೆ ಸಣ್ಣಪ್ಪ, ಶ್ರೀ ಜಗದೀಶ್ ತಂದೆ ಲಕ್ಷ್ಮಣ, ಶ್ರೀ ಮೋನಪ್ಪ ತಂದೆ ನರಸಪ್ಪ, ಶ್ರೀ ಶರಣಪ್ಪ ತಂದೆ ನರಸಪ್ಪ, ಶ್ರೀ ನಾಗಪ್ಪ ತಂದೆ ಚನ್ನಬಸಪ್ಪ, ಶ್ರೀಮತಿ ಬಸಮ್ಮ ಗಂಡ ಆಯಲ್ ರೆಡ್ಡಿ, ಶ್ರೀಮತಿ ಮಲ್ಲಮ್ಮ ಗಂಡ ಭೀಮಪ್ಪ, ಶ್ರೀ ಚನ್ನಬಸಪ್ಪ ತಂದೆ ಭೀಮಣ್ಣ, ಇವರುಗಳ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(ಎ) ರನ್ವಯ ಕ್ರಮ ಕೈಗೊಳ್ಳುವ ಬಗ್ಗೆ.

**ಓದಲಾಗಿದೆ:**

1. ಮುಖ್ಯಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಯಾದಗಿರಿ ಇವರ ಪತ್ರ
   (i) ಸಂಖ್ಯೆ ಜಿಪಂಯಾ/ಗ್ರಾಪಂ/ಸಿಬ್ಬಂದಿ/2015-16/2210, ದಿನಾಂಕ: 26.09.2016.
   (ii) ಸಂಖ್ಯೆ ಜಿಪಂಯಾ/ಗ್ರಾಪಂ/ಸಿಬ್ಬಂದಿ/2015-16/3292, ದಿನಾಂಕ: 19.12.2016.
2. ಸರ್ಕಾರದ ಪತ್ರ ಸಂಖ್ಯೆ:
   (i) ಗ್ರಾಅಪ:864:ಗ್ರಾಪಂಅ:2016, ದಿನಾಂಕ: 21.10.2016 ರ ಕಾರಣ ಕೇಳುವ ನೋಟಿಸ್ಸು.
   (ii) ಗ್ರಾಅಪ:104:ಗ್ರಾಪಂಅ:2017, ದಿನಾಂಕ:08.02.2017 ರ ಕಾರಣ ಕೇಳುವ ನೋಟಿಸ್ಸು.
3. (i) ಆಪಾದಿತ ಅಧ್ಯಕ್ಷರು ಕಾರಣ ಕೇಳುವ ನೋಟಿಸ್‌ಗೆ ನೀಡಿರುವ ಲಿಖಿತ ಹೇಳಿಕೆ ದಿನಾಂಕ:15.11.2016.
   (ii) ಆಪಾದಿತ ಉಪಾಧ್ಯಕ್ಷರು ಹಾಗೂ ಇತರ ಸದಸ್ಯರುಗಳು, ಗಾಜರಕೋಟ ಗ್ರಾಮ ಪಂಚಾಯಿತಿ, ಇವರು ಕಾರಣ ಕೇಳುವ ನೋಟಿಸ್‌ಗೆ ನೀಡಿರುವ ಲಿಖಿತ ಹೇಳಿಕೆ ದಿನಾಂಕ: 27.02.2017.
4. (i) ಅಧ್ಯಕ್ಷರಿಗೆ ವಿಚಾರಣೆಗೆ ಹಾಜರಾಗುವ ತಿಳುವಳಿಕೆ ಪತ್ರ ದಿನಾಂಕ: 27.01.2017.
   (ii) ಉಪಾಧ್ಯಕ್ಷರು ಹಾಗೂ ಇತರ ಸದಸ್ಯರುಗಳಿಗೆ ವಿಚಾರಣೆಗೆ ಹಾಜರಾಗುವ ತಿಳುವಳಿಕೆ ಪತ್ರ ದಿನಾಂಕ: 28.03.2017.

**ಪ್ರಸ್ತಾವನೆ :**

ಮೇಲೆ ಓದಲಾದ ಕ್ರಮ ಸಂಖ್ಯೆ: (1) (i) ರಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಯಾದಗಿರಿ ಇವರು ತಮ್ಮ ಪತ್ರದಲ್ಲಿ ಯಾದಗಿರಿ ತಾಲ್ಲೂಕಿನ ಗಾಜರಕೋಟ ಗ್ರಾಮ ಪಂಚಾಯಿತಿಯಲ್ಲಿ 2015-16 ನೇ ಸಾಲಿನ ಮತ್ತು 2016-17 ನೇ ಸಾಲಿನ 13 ಮತ್ತು 14 ನೇ ಹಣಕಾಸು ಯೋಜನೆಯಡಿ ಗ್ರಾಮ ಪಂಚಾಯಿತಿಗೆ ಬಿಡುಗಡೆಯಾದ ಅನುದಾನದಲ್ಲಿ ಅವ್ಯವಹಾರ ಆಗಿರುವ ಕುರಿತು ಸಲ್ಲಿಸಲಾದ ದೂರಿನ ಮೇರೆಗೆ ಗ್ರಾಮ ಪಂಚಾಯಿತಿಗೆ ಸರಕಾರದಿಂದ ಬಿಡುಗಡೆಯಾದ ಅನುದಾನ ಮತ್ತು ಖರ್ಚಿನ ವಿವರವನ್ನು ಈ ಕೆಳಗಿನಂತೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್ ಯಾದಗಿರಿ, ಇವರು ವರದಿಯನ್ನು ಸಲ್ಲಿಸಿರುತ್ತಾರೆ. ಅದರಂತೆ, 2015-16 ಮತ್ತು 2016-17 ನೇ ಸಾಲಿನ 13 ಮತ್ತು 14 ನೇ ಹಣಕಾಸು ಯೋಜನೆಯ ಅನುದಾನದಲ್ಲಿ ಅವ್ಯವಹಾರ ನಡೆಸಿದೆ ಎನ್ನಲಾದ ಆರೋಪದಡಿ ಸಂಬಂಧಿಸಿದ ಪ್ರಭಾರಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಹಣಮಂತ ಇವರನ್ನು ಈಗಾಗಲೇ ಅಮಾನತ್ತುಗೊಳಿಸಲಾಗಿರುತ್ತದೆಂದು ತಿಳಿಸಿರುತ್ತಾರೆ.

ಮುಂದುವರೆದು, ಗಾಜರಕೋಟ ಗ್ರಾಮ ಪಂಚಾಯಿತಿಯಲ್ಲಿ ವಿನಿಯೋಗಿಸಲಾದ ಅನುದಾನದಲ್ಲಿ ಸದರಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶ್ರೀಮತಿ ಕಾಶಮ್ಮ ಗಂಡ ಅಂಜಪ್ಪ ಶಿವಪೂರ ಇವರು ತನ್ನ

ಪತಿಯವರಾದ ಶ್ರೀ ಅಂಜಪ್ಪ ತಂದೆ ಭೀಮಣ್ಣ ಇವರ ಹೆಸರಿನಲ್ಲಿ ಸುಮಾರು 15 ಚೆಕ್‌ಗಳ ಮುಖಾಂತರ ರೂ.2,43,000.00 ಗಳನ್ನು ಪ್ರಗತಿ ಕೃಷ್ಣ ಗ್ರಾಮೀಣ ಬ್ಯಾಂಕ್ ಖಾತೆ ಸಂಖ್ಯೆ: 11043100008051 ಮತ್ತು ಎಸ್.ಬಿ.ಎಂ ಯಾದಗಿರಿ ಬ್ಯಾಂಕ್ ಖಾತೆ ಸಂಖ್ಯೆ: 64181000336 ಖಾತೆಯಿಂದ ಹಣ ಸೆಳೆದಿರುತ್ತಾರೆ ಎಂದು ವರದಿಯನ್ನು ಸಲ್ಲಿಸುತ್ತಾ, ಒಬ್ಬ ಚುನಾಯಿತ ಪ್ರತಿನಿಧಿಯಾಗಿ ಮತ್ತು ಗ್ರಾಮ ಪಂಚಾಯಿತಿಯ ಅಧ್ಯಕ್ಷರ ಅವಧಿಯಲ್ಲಿ ಹಣ ಸೆಳೆದಿರುವ ಆರೋಪವು ದೃಢಪಟ್ಟಿರುವುದರಿಂದ ಇವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ ನಿಯಮ 43(ಎ) ಅಡಿಯಲ್ಲಿ ಶಿಸ್ತು ಕ್ರಮ ಕೈಗೊಳ್ಳಲು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಹಾಗೂ ಮೇಲೆ ಓದಲಾದ ಕ್ರಮ ಸಂಖ್ಯೆ: (1) (ii) ರಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಯಾದಗಿರಿ, ಇವರು ತಮ್ಮ ಪತ್ರದಲ್ಲಿ ಗಾಜರಕೋಟ ಗ್ರಾಮ ಪಂಚಾಯಿತಿಯ ಉಪಾಧ್ಯಕ್ಷರು ಹಾಗೂ ಆಪಾದಿತ ಸದಸ್ಯರುಗಳು ಅವರ ಹೆಸರಿಗೆ ಹಾಗೂ ಅವರ ಸಂಬಂಧಿಕರ ಹೆಸರಿನಲ್ಲಿ ವಿವಿಧ ಯೋಜನೆಯಡಿ ಚೆಕ್‌ಗಳನ್ನು ಪಡೆದಿರುವುದರಿಂದ ಶಿಸ್ತು ಕ್ರಮ ಜರುಗಿಸುವಂತೆ ಪ್ರಸ್ತಾವನೆಯಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಯಾದಗಿರಿ ತಾಲೂಕಿನ ಗಾಜರಕೋಟ ಗ್ರಾಮ ಪಂಚಾಯಿತಿಯಲ್ಲಿ 2015-16 ನೇ ಸಾಲಿನ ಮತ್ತು 2016-17 ನೇ ಸಾಲಿನ ವಿವಿಧ ಯೋಜನೆಗಳ ಅನುಸಾರ ಅನುಷ್ಠಾನಗೊಳಿಸಿರುವ ಖರ್ಚು ವೆಚ್ಚದ ತಖ್ತೆಯನ್ನು ತಯಾರಿಸಿ, ಬ್ಯಾಂಕ್ ತಖ್ತೆಯೊಂದಿಗೆ ಸದರಿ ಗ್ರಾಮ ಪಂಚಾಯಿತಿ ಸದಸ್ಯರುಗಳು ಮತ್ತು ಸದಸ್ಯರ ರಕ್ತ ಸಂಬಂಧಿಗಳು ನಿಯಮಬಾಹಿರವಾಗಿ ಚೆಕ್‌ಗಳನ್ನು ಪಡೆದಿರುವುದರಿಂದ ಸದರಿ ಗ್ರಾಮ ಪಂಚಾಯತಿಯ ಆಪಾದಿತ ಉಪಾಧ್ಯಕ್ಷರು ಹಾಗೂ ಸದಸ್ಯರುಗಳ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ 43 (ಎ) ರಡಿಯಲ್ಲಿ ಸದಸ್ಯತ್ವ ರದ್ದುಗೊಳಿಸಲು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮುಂದುವರೆದು, ಗಾಜರಕೋಟ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾದ ಶ್ರೀಮತಿ ಕಾಶಮ್ಮನವರು ದಿನಾಂಕ:19.12.2016 ರಂದು ಮಾನ್ಯ ಪ್ರಧಾನ ಕಾರ್ಯದರ್ಶಿಯವರಿಗೆ ದೂರು ಸಲ್ಲಿಸಿದ್ದು, ಗಾಜರಕೋಟ ಗ್ರಾಮ ಪಂಚಾಯಿತಿಯ ವಿವಿಧ ಯೋಜನೆಗಳ ಹಾಗೂ ಅನುದಾನದ ಹಣವನ್ನು ತಮ್ಮ ಖಾತೆಗೆ ಹಣ ಹಾಕಿಸಿಕೊಂಡು ಹಣ ದುರ್ಬಳಕೆ ಮಾಡಿ ಗ್ರಾಮ ಪಂಚಾಯಿತಿ ನಿಯಮ ಉಲ್ಲಂಘನೆ ಮಾಡಿರುವ ಪಂಚಾಯಿತಿ ಉಪಾಧ್ಯಕ್ಷರಾದ ಶ್ರೀಮತಿ ಅನುಸೂಜ ಗಂಡ ಸಾಬಣ್ಣ ಗಾರೇಬಾನಿ ಹಾಗೂ ಸದಸ್ಯರುಗಳಾದ ಬಸಮ್ಮ ಗಂಡ ಆಯಲ್‌ರೆಡ್ಡಿ, ಮಲ್ಲಮ್ಮ ಗಂಡ ಭೀಮಪ್ಪ, ಚನ್ನಬಸಪ್ಪ ತಂದೆ ಭೀಮಣ್ಣ ಹಾಗೂ ಮೇಲಿನ ಆರೋಪಿತ ಸದಸ್ಯರುಗಳು ಭಾಗಿಯಾಗಿದ್ದಾರೆಂದು ಹಾಗೂ ಕಂಪ್ಯೂಟರ್ ಆಪರೇಟರ್ ಮತ್ತು ಬಿಲ್ ಕಲೆಕ್ಟರ್‌ರವರು ಕೂಡ ಇದರಲ್ಲಿ ಶಾಮೀಲಾಗಿರುವುದಾಗಿ ಅವರುಗಳ ವಿರುದ್ಧ ಕ್ರಮ ಜರುಗಿಸುವಂತೆ ದೂರಿನಲ್ಲಿ ತಿಳಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2) (i) ರಲ್ಲಿ ಆಪಾದಿತ ಅಧ್ಯಕ್ಷರಿಗೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ರ ಪ್ರಕರಣ 43-ಎ ರ ಅಡಿಯಲ್ಲಿ ಕ್ರಮ ವಹಿಸುವ ಪೂರ್ವದಲ್ಲಿ ನಿಯಮಾನುಸಾರ ಕಾರಣ ಕೇಳುವ ನೋಟಿಸ್ಸನ್ನು ಜಾರಿ ಮಾಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2) (ii) ರಲ್ಲಿ ಆಪಾದಿತ ಉಪಾಧ್ಯಕ್ಷರು ಹಾಗೂ ಇತರ ಸದಸ್ಯರುಗಳಿಗೆ ದಿನಾಂಕ: 08.02.2017 ರಂದು ಕಾರಣ ಕೇಳುವ ನೋಟಿಸ್ಸನ್ನು ರಂದು ಜಾರಿ ಮಾಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (3) (i) ರಲ್ಲಿ ಆಪಾದಿತ ಅಧ್ಯಕ್ಷರು ದಿನಾಂಕ:15.11.2016. ರಂದು ಕಾರಣ ಕೇಳುವ ನೋಟಿಸ್ಸಿಗೆ ಈ ಕೆಳಕಂಡಂತೆ ಉತ್ತರ ಸಲ್ಲಿಸಿರುತ್ತಾರೆ.

ಗಾಜರಕೋಟ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾದ ಶ್ರೀಮತಿ ಕಾಶಮ್ಮ ಗಂಡ ಅಂಜಪ್ಪ ರವರು ಅಧ್ಯಕ್ಷರಾದ ಮೇಲೆ 13 ಮತ್ತು 14 ಹಣಕಾಸು ಯೋಜನೆಯಲ್ಲಿ ಯಾವುದೇ ಅವ್ಯವಹಾರ ಅಥವಾ ಹಣ ದುರುಪಯೋಗ ಮಾಡಿರುವುದಿಲ್ಲವೆಂದು, ಅವರು ಪರಿಶಿಷ್ಟ ಪಂಗಡದ ಏಕೈಕ ಮಹಿಳಾ ಸದಸ್ಯರಾಗಿದ್ದು, ಅವರು ಮತ್ತು ಅವರ ಗಂಡ ಅನಕ್ಷರಸ್ಥರಾಗಿದ್ದು, ಅವರ ಮೇಲಿನ ದ್ವೇಶದಿಂದ 9 ಮಂದಿ ಮೇಲು ಜಾತಿಯ ಇತರ ಸದಸ್ಯರು ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹಣಮಂತನವರು ಒಂದೇ ಜಾತಿಗೆ

ಸೇರಿದವರಾಗಿದ್ದು, ದಲಿತ ಮಹಿಳೆಯಾದ ಅವರ ಮೇಲೆ ಮತ್ತು ಅವರ ಕುಟುಂಬ ಸದಸ್ಯರನ್ನು ತೊಂದರೆಗೆ ಒಳಪಡಿಸಬೇಕೆಂಬ ಉದ್ದೇಶದಿಂದ ಮತ್ತು ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸುವ ಸಲುವಾಗಿ ಅನಕ್ಷರಸ್ಥಳಾದ ಅವರಿಗೆ ಯಾವುದೇ ಯೋಜನೆಗಳ ಮಾಹಿತಿಯನ್ನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ತಿಳಿಸದೆ ದಾರಿ ತಪ್ಪಿಸಿದ್ದು, ಗ್ರಾಮ ಪಂಚಾಯಿತಿ ಕೆಲಸ ಕಾರ್ಯಗಳಿಗೆ ಹಣ ಬೇಕಾಗುತ್ತದೆಂದು ಹೇಳಿ ಒತ್ತಡ ತಂದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿರವರು ಸಾಕಷ್ಟು ಚೆಕ್‌ಗಳಿಗೆ ಸಹಿ ಹಾಕಿಸಿಕೊಂಡಿರುತ್ತಾರೆಂದು, ಹಿಗೇಕೆ ಎಂದು ಪ್ರಶ್ನಿಸಿದರೆ, ಗ್ರಾಮ ಪಂಚಾಯಿತಿಯ ವ್ಯಾಪ್ತಿಯ ಕುಡಿಯುವ ನೀರು, ಚರಂಡಿ ಸ್ವಚ್ಛ ಪಡಿಸಲು, ಬೀದಿ ದೀಪಗಳ ನಿರ್ವಹಣೆ ಹಾಗೂ ಮತ್ತಿತರ ಕೆಲಸ ಕಾರ್ಯಗಳಿಗೆ ನೇರವಾಗಿ ಹಣವನ್ನು ಚೆಕ್ ಮೂಲಕ ನೀಡಬೇಕೆಂದು ಒತ್ತಡ ತಂದು ಕಾನೂನಿನ ಅರಿವಿಲ್ಲದ ಅವರಿಗೆ, ಅವರ ಗಂಡನ ಬ್ಯಾಂಕ್ ಖಾತೆಗೆ ಉದ್ದೇಶಪೂರ್ವಕವಾಗಿ ಹಣ ಜಮಾ ಮಾಡಿಸಿ ನಂತರ ಪಂಚಾಯಿತಿ ಅಭಿವೃದ್ಧಿ ಅಧಿಕಾರಿರವರು ಹಣ ಪಡೆಯುತ್ತಿದ್ದಾರೆಂದು ತಿಳಿಸಿರುತ್ತಾರೆ. ಅವರ ಮೇಲಿನ ಆರೋಪವು ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸಲು ಉದ್ದೇಶಪೂರ್ವಕವಾಗಿ ಮಾಡಿದ ಕುತಂತ್ರವಾಗಿದ್ದು ಮೇಲಿನ ಎಲ್ಲಾ ವಿಷಯಗಳನ್ನು ಗಣನೆಗೆ ತೆಗೆದುಕೊಂಡು ಅವರನ್ನು ಆರೋಪ ಮುಕ್ತರನ್ನಾಗಿ ಮಾಡಬೇಕೆಂದು ವಿನಂತಿಸಿಕೊಂಡಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (3) (ii) ರಲ್ಲಿ ಆಪಾದಿತ ಉಪಾಧ್ಯಕ್ಷರು ಹಾಗೂ ಇತರ ಸದಸ್ಯರುಗಳು ದಿನಾಂಕ:15.11.2016. ರಂದು ಕಾರಣ ಕೇಳುವ ನೋಟಿಸ್ಸಿಗೆ ಈ ಕೆಳಕಂಡಂತೆ ಉತ್ತರ ಸಲ್ಲಿಸಿರುತ್ತಾರೆ.

ಗಾಜರಕೋಟ ಗ್ರಾಮ ಪಂಚಾಯಿತಿಯ ಉಪಾಧ್ಯಕ್ಷರಾದ, ಶ್ರೀಮತಿ ಅನುಸೂಜ ಗಂಡ ಸಾಬಣ್ಣಾ ಗಾರೇಬಾನಿ, ಸದಸ್ಯರುಗಳಾದ, ಶ್ರೀಮತಿ ಮೋನಮ್ಮ ಗಂಡ ನಾರಾಯಣಪ್ಪ, ಶ್ರೀ ನಾಗಪ್ಪ ತಂದೆ ಸಣ್ಣಪ್ಪ, ಶ್ರೀ ಜಗದೀಶ್ ತಂದೆ ಲಕ್ಷ್ಮಣ, ಶ್ರೀ ಮೋನಪ್ಪ ತಂದೆ ನರಸಪ್ಪ, ಶ್ರೀ ಶರಣಪ್ಪ ತಂದೆ ನರಸಪ್ಪ, ಶ್ರೀ ನಾಗಪ್ಪ ತಂದೆ ಚನ್ನಬಸಪ್ಪ, ಶ್ರೀಮತಿ ಬಸಮ್ಮ ಗಂಡ ಆಯಲ್ ರೆಡ್ಡಿ, ಶ್ರೀಮತಿ ಮಲ್ಲಮ್ಮ ಗಂಡ ಭೀಮಪ್ಪ, ಶ್ರೀ ಚನ್ನಬಸಪ್ಪ ತಂದೆ ಭೀಮಣ್ಣ, ತಮ್ಮ ಲಿಖಿತ ಹೇಳಿಕೆಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹಾಗೂ ಅಧ್ಯಕ್ಷರು ಉದ್ದೇಶಪೂರ್ವಕವಾಗಿ ಸರಿಯಾದ ಮಾಹಿತಿ ನೀಡದೆ ಕಳಂಕ ತರಲು ಸಂಚು ರೂಪಿಸಿರುತ್ತಾರೆಂದು ದೂರಿರುತ್ತಾರೆ. ಹಾಗೂ ಅವರುಗಳ ಮೇಲಿನ ಆರೋಪಗಳನ್ನು ಅಲ್ಲಗಳೆದಿರುತ್ತಾರೆ, ಹಾಗೂ ಸದರಿ ಪ್ರಕರಣವನ್ನು ಕೈಬಿಡಬೇಕೆಂದು ಮಾನ್ಯರಲ್ಲಿ ವಿನಂತಿಸಿಕೊಂಡಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ:(4) (i) ರಲ್ಲಿ ಆಪಾದಿತ ಅಧ್ಯಕ್ಷರು ಮಾನ್ಯ ಪ್ರಧಾನ ಕಾರ್ಯದರ್ಶಿಯವರ ನ್ಯಾಯಾಲಯದ ವಿಚಾರಣೆಗೆ ಹಾಜರಿದ್ದು, ಅವರಿಗೆ ಹಾಗೂ ಅವರ ಪತಿಗೆ ತಿಳಿಯದೇ ಅವರ ಹೆಸರಿನಲ್ಲಿ ಚೆಕ್ ಹಾಕಿರುವುದಾಗಿ ಅವರು ಅನಕ್ಷರಸ್ಥರಾಗಿದ್ದು ಅವರಿಗೆ ಕಾನೂನಿನ ಅರಿವಿಲ್ಲವೆಂದು ತಿಳಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ:(4) (ii) ರಲ್ಲಿ ಮಾನ್ಯ ಪ್ರಧಾನ ಕಾರ್ಯದರ್ಶಿಯವರ ನ್ಯಾಯಾಲಯದ ವಿಚಾರಣೆಗೆ ಆಪಾದಿತ ಸದಸ್ಯರುಗಳು, ಯಾದಗಿರಿ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು, ಮುಖ್ಯ ಯೋಜನಾಧಿಕಾರಿ, ಯಾದಗಿರಿ ಜಿಲ್ಲೆ, ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹಾಗೂ ಗಾಜರಕೋಟ ಗ್ರಾಮ ಪಂಚಾಯಿತಿಯ ಹಾಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ವಿಚಾರಣೆಗೆ ಹಾಜರಿರುತ್ತಾರೆ. ಆಪಾದಿತ ಸದಸ್ಯರುಗಳು, ತಮಗೆ ತಿಳಿಯದೆ ಗ್ರಾಮ ಪಂಚಾಯಿತಿಯ ಕೆಲಸ ನಿರ್ವಹಿಸಿದ್ದು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ನಮ್ಮ ಹೆಸರಿಗೆ ಚೆಕ್ ನೀಡಿರುವುದರಿಂದ ಹಣ ಪಡೆದಿದ್ದಾಗಿ ತಿಳಿಸಿರುತ್ತಾರೆ.

ಮಾನ್ಯ ಪ್ರಧಾನ ಕಾರ್ಯದರ್ಶಿಯವರ ನ್ಯಾಯಾಲಯದಲ್ಲಿ ದಿನಾಂಕ:05.06.2017 ರಂದು ನಡೆಸಿದ ವಿಚಾರಣೆ ವೇಳೆಯಲ್ಲಿ ಮಾನ್ಯ ಪ್ರಧಾನ ಕಾರ್ಯದರ್ಶಿಯವರು ಕಡತ ಸಂಖ್ಯೆ: ಗ್ರಾಅಪ:864:ಗ್ರಾಪಂಅ:2016 ಹಾಗೂ ಗ್ರಾಅಪ:104:ಗ್ರಾಪಂಅ:2017 ಎರಡೂ ಕಡತಗಳು ಒಂದೇ ಗ್ರಾಮ ಪಂಚಾಯಿತಿಗೆ ಸಂಬಂಧಪಟ್ಟವಾಗಿರುವುದರಿಂದ ಎರಡು ಕಡತಗಳನ್ನು ಒಂದುಗೂಡಿಸಿ, ಸದರಿ ಪ್ರಕರಣದಲ್ಲಿ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಯವರ ವರದಿ ಹಾಗೂ ಸದರಿ ಆಪಾದಿತರು ನೀಡಿರುವ ಲಿಖಿತ ಹೇಳಿಕೆ ಹಾಗೂ ಎಲ್ಲಾ ಸಾಕ್ಷ್ಯಧಾರಗಳನ್ನು ಪರಿಶೀಲಿಸಿ, ಸರ್ಕಾರವು ಈ ಪ್ರಕರಣದಲ್ಲಿನ ವಾಸ್ತವಾಂಶಗಳನ್ನು ಮನದಟ್ಟು ಮಾಡಿಕೊಂಡು, ಆರೋಪಿತರೆಲ್ಲರಿಗೂ ನಿಯಮಗಳ ತಿಳುವಳಿಕೆ ಇಲ್ಲದೆ ಗ್ರಾಮ ಪಂಚಾಯಿತಿಯ ಕೆಲಸ ನಿರ್ವಹಿಸಿ ಚೆಕ್ ಪಡೆದಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಆರೋಪಿತರೆಲ್ಲರಿಗೂ

ಇನ್ನು ಮುಂದೆ ಇಂತಹ ಪ್ರಸಂಗಗಳು ಮರುಕಳಿಸದಂತೆ ಎಚ್ಚರಿಕೆ ನೀಡಿ ಮುಂದೆ ಇಂತಹ ಪ್ರಸಂಗಗಳು ಮರುಕಳಿಸಿದ್ದಲ್ಲಿ ಶಿಸ್ತು ಕ್ರಮಕೈಗೊಳ್ಳಲಾಗುವುದೆಂದು ತಿಳಿಸಿ ಪ್ರಕರಣ ಮುಕ್ತಾಯಗೊಳಿಸಲು ನಿರ್ಣಯಿಸಿದೆ.

ಅದರಂತೆ ಈ ಕೆಳಕಂಡಂತೆ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ:864:ಗ್ರಾಪಂಅ:2016 ಹಾಗೂ ಗ್ರಾಅಪ/104/ಗ್ರಾಪಂಅ/2017**
**ಬೆಂಗಳೂರು, ದಿನಾಂಕ:-30-10-2017.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಗಾಜರಕೋಟ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾದ ಶ್ರೀಮತಿ ಕಾಶಮ್ಮ ಗಂಡ ಅಂಜಪ್ಪ, ಉಪಾಧ್ಯಕ್ಷರಾದ, ಶ್ರೀಮತಿ ಅನುಸೂಜ ಗಂಡ ಸಾಬಣ್ಣ ಗಾರೇಬಾನಿ, ಸದಸ್ಯರುಗಳಾದ, ಶ್ರೀಮತಿ ಮೋನಮ್ಮ ಗಂಡ ನಾರಾಯಣಪ್ಪ, ಶ್ರೀ ನಾಗಪ್ಪ ತಂದೆ ಸಣ್ಣಪ್ಪ, ಶ್ರೀ ಜಗದೀಶ್ ತಂದೆ ಲಕ್ಷ್ಮಣ, ಶ್ರೀ ಮೋನಪ್ಪ ತಂದೆ ನರಸಪ್ಪ, ಶ್ರೀ ಶರಣಪ್ಪ ತಂದೆ ನರಸಪ್ಪ, ಶ್ರೀ ನಾಗಪ್ಪ ತಂದೆ ಚನ್ನಬಸಪ್ಪ, ಶ್ರೀಮತಿ ಬಸಮ್ಮ ಗಂಡ ಆಯಲ್ ರೆಡ್ಡಿ, ಶ್ರೀಮತಿ ಮಲ್ಲಮ್ಮ ಗಂಡ ಭೀಮಪ್ಪ, ಶ್ರೀ ಚನ್ನಬಸಪ್ಪ ತಂದೆ ಭೀಮಣ್ಣ, ಇವರುಗಳು ನಿಯಮಗಳ ತಿಳುವಳಿಕೆ ಇಲ್ಲದೆ ಗ್ರಾಮ ಪಂಚಾಯಿತಿಯ ಕೆಲಸ ನಿರ್ವಹಿಸಿ ಚೆಕ್ ಪಡೆದಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಆರೋಪಿತರೆಲ್ಲರಿಗೂ ಇನ್ನು ಮುಂದೆ ಇಂತಹ ಪ್ರಸಂಗಗಳು ಮರುಕಳಿಸದಂತೆ ಎಚ್ಚರಿಕೆ ನೀಡಿ ಮುಂದೆ ಇಂತಹ ಪ್ರಸಂಗಗಳು ಮರುಕಳಿಸಿದ್ದಲ್ಲಿ ಶಿಸ್ತು ಕ್ರಮಕೈಗೊಳ್ಳಲಾಗುವುದೆಂದು ತಿಳಿಸಿ ಪ್ರಕರಣ ಮುಕ್ತಾಯಗೊಳಿಸಿ ಆದೇಶಿಸಲಾಗಿದೆ.

(ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್)
ಗ್ರಾಅಪ ಇಲಾಖೆ ರವರಿಂದ ಅನುಮೋದಿತ)

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1. ಮುಖ್ಯಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಯಾದಗಿರಿ ಜಿಲ್ಲೆ.
2. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಯಾದಗಿರಿ ತಾಲ್ಲೂಕು, ಯಾದಗಿರಿ ಜಿಲ್ಲೆ.
3. ಶ್ರೀಮತಿ ಕಾಶಮ್ಮ ಗಂಡ ಅಂಜಪ್ಪ, ಅಧ್ಯಕ್ಷರು, ಗಾಜರಕೋಟ ಗ್ರಾಮ ಪಂಚಾಯಿತಿ, ಯಾದಗಿರಿ ತಾಲ್ಲೂಕು, ಯಾದಗಿರಿ ಜಿಲ್ಲೆ.
4. ಶ್ರೀಮತಿ ಅನುಸೂಜ ಗಂಡ ಸಾಬಣ್ಣ ಗಾರೇಬಾನಿ, ಉಪಾಧ್ಯಕ್ಷರು, ಗಾಜರಕೋಟ ಗ್ರಾಮ ಪಂಚಾಯಿತಿ, ಯಾದಗಿರಿ ತಾಲ್ಲೂಕು, ಯಾದಗಿರಿ ಜಿಲ್ಲೆ.
5. ಶ್ರೀಮತಿ ಮೋನಮ್ಮ ಗಂಡ ನಾರಾಯಣಪ್ಪ, ಸದಸ್ಯರು, ಗಾಜರಕೋಟ ಗ್ರಾಮ ಪಂಚಾಯಿತಿ, ಯಾದಗಿರಿ ತಾಲ್ಲೂಕು, ಯಾದಗಿರಿ ಜಿಲ್ಲೆ.
6. ಶ್ರೀ ನಾಗಪ್ಪ ತಂದೆ ಸಣ್ಣಪ್ಪ, ಸದಸ್ಯರು, ಗಾಜರಕೋಟ ಗ್ರಾಮ ಪಂಚಾಯಿತಿ, ಯಾದಗಿರಿ ತಾಲ್ಲೂಕು, ಯಾದಗಿರಿ ಜಿಲ್ಲೆ.
7. ಶ್ರೀ ಜಗದೀಶ್ ತಂದೆ ಲಕ್ಷ್ಮಣ, ಸದಸ್ಯರು, ಗಾಜರಕೋಟ ಗ್ರಾಮ ಪಂಚಾಯಿತಿ, ಯಾದಗಿರಿ ತಾಲ್ಲೂಕು, ಯಾದಗಿರಿ ಜಿಲ್ಲೆ.
8. ಶ್ರೀ ಮೋನಪ್ಪ ತಂದೆ ನರಸಪ್ಪ, ಸದಸ್ಯರು, ಗಾಜರಕೋಟ ಗ್ರಾಮ ಪಂಚಾಯಿತಿ, ಯಾದಗಿರಿ ತಾಲ್ಲೂಕು, ಯಾದಗಿರಿ ಜಿಲ್ಲೆ.
9. ಶ್ರೀ ಶರಣಪ್ಪ ತಂದೆ ನರಸಪ್ಪ, ಸದಸ್ಯರು, ಗಾಜರಕೋಟ ಗ್ರಾಮ ಪಂಚಾಯಿತಿ, ಯಾದಗಿರಿ ತಾಲ್ಲೂಕು, ಯಾದಗಿರಿ ಜಿಲ್ಲೆ.

10. ಶ್ರೀ ನಾಗಪ್ಪ ತಂದೆ ಚನ್ನಬಸಪ್ಪ, ಸದಸ್ಯರು, ಗಾಜರಕೋಟ ಗ್ರಾಮ ಪಂಚಾಯಿತಿ, ಯಾದಗಿರಿ ತಾಲ್ಲೂಕು, ಯಾದಗಿರಿ ಜಿಲ್ಲೆ.
11. ಶ್ರೀಮತಿ ಬಸಮ್ಮ ಗಂಡ ಆಯಲ್ ರೆಡ್ಡಿ, ಸದಸ್ಯರು, ಗಾಜರಕೋಟ ಗ್ರಾಮ ಪಂಚಾಯಿತಿ, ಯಾದಗಿರಿ ತಾಲ್ಲೂಕು, ಯಾದಗಿರಿ ಜಿಲ್ಲೆ.
12. ಶ್ರೀಮತಿ ಮಲ್ಲಮ್ಮ ಗಂಡ ಭೀಮಪ್ಪ, ಸದಸ್ಯರು, ಗಾಜರಕೋಟ ಗ್ರಾಮ ಪಂಚಾಯಿತಿ, ಯಾದಗಿರಿ ತಾಲ್ಲೂಕು, ಯಾದಗಿರಿ ಜಿಲ್ಲೆ.
13. ಶ್ರೀ ಚನ್ನಬಸಪ್ಪ ತಂದೆ ಭೀಮಣ್ಣ, ಸದಸ್ಯರು, ಗಾಜರಕೋಟ ಗ್ರಾಮ ಪಂಚಾಯಿತಿ, ಯಾದಗಿರಿ ತಾಲ್ಲೂಕು, ಯಾದಗಿರಿ ಜಿಲ್ಲೆ.
14. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಗಾಜರಕೋಟ ಗ್ರಾಮ ಪಂಚಾಯಿತಿ, ಯಾದಗಿರಿ ತಾಲ್ಲೂಕು, ಯಾದಗಿರಿ ಜಿಲ್ಲೆ.
15. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.
16. ವೆಬ್‌ಸೈಟ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.